ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಶೌಚಾಲಯ ನಿರ್ಮಾಣದಲ್ಲಿ ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಲು ಸರ್ಕಾರದವರು ಮಾಡಿರುವ ವ್ಯವಸ್ಥೆ ಏನು?

ಆ) ಅವುಗಳನ್ನು ತಾವೇ ಒದಗಿಸಿಕೊಳ್ಳುವಂತೆ ಫಲಾನುಭವಿಗಳಿಗೆ ಸೂಚಿಸಲಾಗಿದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಸುಲಭವಾಗಿ ದೊರೆಯದೇ ಇರುವ ಪ್ಯಾನ್, ಟ್ಯಾಪ್, ಪಿವಿಸಿ ಪೈಪ್ ಮುಂತಾದ ಸಾಮಗ್ರಿಗಳನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯಿಂದ, ಸಬ್ಸಿಡಿ ಹಣದಲ್ಲಿ ಕ್ರಯಕ್ಕೆ ಪಡೆದು ಒದಗಿಸುವ ವ್ಯವಸ್ಥೆ ಮಾಡಿದೆ.

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಸುಲಭವಾಗಿ ದೊರೆಯುವ ಸಿಮೆಂಟ್, ಮರಳು ಮುಂತಾದ ಸಾಮಗ್ರಿಗಳನ್ನು ಫಲಾನುಭವಿಗಳೇ ಕೊಳ್ಳಬಹುದಾಗಿದೆ. ಹಾಗೂ ಫಲಾನುಭವಿಗಳು ಇತರ ಸಾಮಗ್ರಿಗಳನ್ನು ಸಹ ತಾವೇ ಕೊಳ್ಳುವುದಾದಲ್ಲಿ, ನಿಗಧಿತ ಮಾದರಿಯಲ್ಲೆ ಇದ್ದಲ್ಲೆ ಅವರೇ ಕೊಳ್ಳಲು ಆಕ್ಷೇಪಣೆ ಇರುವುದಿಲ್ಲ.

ವಿಷಯ:- ಗದಗ ತಾಲ್ಲೂಕಿನ ಬಿಂಕದಕಟ್ಟಿ ಪ್ರಾಣಿಸಂಗ್ರಾಲಯದ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 146 (455)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಶುಪಕ್ಷಿಗಳನ್ನು ಇಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಉತ್ತರ ಕರ್ನಾಟಕದಲ್ಲಿರುವ ಈ ಪ್ರಾಣಿ ಸಂಗ್ರಹಾಲಯವನ್ನು ಮೈಸೂರಿನಲ್ಲಿರುವ ಪ್ರಾಣಿಸಂಗ್ರಹಾಲಯದ ಮಟ್ಟಕ್ಕೆ ಎತ್ತರಿಸುವ ವಿಚಾರವು ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ ಸರ್ಕಾರದವರು ಕಾಲಮಿತಿಗೊಳಪಟ್ಟು ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸುವರೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಪ್ರಸಕ್ತ ಹಣಕಾಸು ವರ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಶುಪಕ್ಷಿಗಳನ್ನು ಇಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಆ) 1. ಮೈಸೂರು ಮೃಗಾಲಯದ ಮಟ್ಟಕ್ಕೆ ಎತ್ತರಿಸುವ ಯೋಜನೆ ಇರುವುದಿಲ್ಲ.

2. ಈ ಮೃಗಾಲಯವನ್ನು ಹಂತಹಂತವಾಗಿ ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹೊಂದಲಾಗುವುದು.

ವಿಷಯ:- ಜಿಲ್ಲಾ ಯೋಜನಾ ಮಂಡಳಿಗಳ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 147 (457)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಅಸ್ತಿತ್ವಕ್ಕೆ ಬಂದು ಸುಮಾರು ಒಂದು ವರ್ಷವಾಗುತ್ತ ಬಂದರೂ ಸಹ ಜಿಲ್ಲಾ ಯೋಜನಾ ಮಂಡಳಿಗಳನ್ನು ರಚಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಆ) ಇಷ್ಟು ದೀರ್ಘ ಕಾಲದಿಂದ ಜಿಲ್ಲಾ ಯೋಜನಾ ಮಂಡಳಿ ರಚಿಸುವಲ್ಲಿ ವಿಳಂಬವಾಗಿರುವುದಕ್ಕೆ ಹೊಣೆಗಾರರು ಯಾರು?

ಇ) ಈ ವಿಳಂಬದಿಂದಾಗಿ ಜಿಲ್ಲಾ ಯೋಜನೆಗಳನ್ನು ರೂಪಿಸುವಾಗ ಜನಪ್ರತಿನಿಧಿಗಳನ್ನು ಯೋಜನೆಗಳನ್ನು ರೂಪಿಸುವಾಗ ಪ್ರಕ್ರಿಯೆಯಿಂದ ದೂರವಿರಿಸಿದಂತೆ ಆಗುವುದಿಲ್ಲವೇ?

ಈ) ಸರ್ಕಾರದವರು ಈಗಲಾದರೂ ಜಿಲ್ಲಾ ಯೋಜನಾ ಮಂಡಳಿಗಳನ್ನು ರಚಿಸಲು ತ್ವರಿತ ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):-

ಅ ಮತ್ತು ಆ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ 310ರಡಿ ಪ್ರತಿ ಜಿಲ್ಲೆಗೆ ಒಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಬೇಕಾಗಿದೆ. ಈ ಬಗ್ಗೆ ನಿಯಮಗಳನ್ನು ರಚಿಸಲು ಕಾನೂನು ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ. ಈ ಮಧ್ಯೆ ಶ್ರೀ ಪಿ.ಆರ್.ನಾಯಕ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ತಜ್ಞರ ಸಮಿತಿಯು ತನ್ನ ವರದಿಯಲ್ಲಿ ಜಿಲ್ಲಾ ಯೋಜನಾ ಸಮಿತಿಗಳ ರಚನೆಯ ಬಗ್ಗೆ ಕೆಲವೊಂದು ಸಲಹೆಗಳನ್ನು ಮಾಡಿದೆ. ಈ ಸಲಹೆಗಳನ್ನು ಕೂಡಾ ಪರಿಗಣನೆಗೆ ತೆಗೆದುಕೊಂಡು ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಇ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ವಾರ್ಷಿಕ ಯೋಜನೆಗಳನ್ನು ರೂಪಿಸುವುದು ಆಯಾ ಪಂಚಾಯಿತಿಯ ಜವಾಬ್ದಾರಿಯಾಗಿರುತ್ತದೆ. ಚುನಾಯಿತ ಸದಸ್ಯರ ವಾರ್ಷಿಕ ಮತ್ತು ಕ್ರಿಯಾ ಯೋಜನೆಗಳನ್ನು ತಯಾರಿಸುವುದರಿಂದ ಯೋಜನೆಗಳನ್ನು ರೂಪಿಸುವಾಗ ಜನಪ್ರತಿನಿಧಿಗಳು ಈ ಕಾರ್ಯದಲ್ಲಿ ಭಾಗವಹಿಸುತ್ತಿದ್ದಾರೆ.